**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.72/2020 C/W 137/2022**

**(ಚಾ.ಸಾ.1/ಪ್ರಾ.ಸಾ.1)**

ತಾಃ 06.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಕೆ.ಪಿ. ಸತ್ಯನಾರಾಯಣ |
| ತಂದೆಯ ಹೆಸರು | ಕೆ.ಹೆಚ್. ಪಾಂಡುರಂಗಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಸಿಪಿಐ, ಗೌರಿಬಿದನೂರು |
| ವಾಸ ಸ್ಥಳ | ಗೌರಿಬಿದನೂರು |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ನಾನು ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಜನೇವರಿ 2019 ರಿಂದ ಜನೇವರಿ 2020 ರ ವರೆಗೆ ಪಿಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ23.07.2019 ರಂದು ನಮ್ಮ ಠಾಣೆಯ ಮೊಕದ್ದಮೆ ಸಂಖ್ಯೆ 340/2019 ಪ್ರಕರಣದ ತನಿಖಾ ಕರ್ತವ್ಯದಲ್ಲಿ ಇದ್ದೇನು. ದಿಃ07.08.2019 ರಂದು ಸಂಜೆ 5.30 ರ ಸಮಯದಲ್ಲಿ ಸಿ.ಆರ್.ಸಂಖ್ಯೆ 340/2019 ಪ್ರಕರಣದ ಇಬ್ಬರು ಆರೋಪಿತರು ಮಾಗಡಿ ರಸ್ತೆಯಲ್ಲಿ ಕೆಎ-02/ಎಎ-5919 ವಾಹನದಲ್ಲಿ

ತಿರುಗಾಡುತ್ತಿರುವ ಬಗ್ಗೆ ನನಗೆ ಮಾಹಿತಿ ಬಂದಿರುತ್ತದೆ. ತಕ್ಷಣ ನಮ್ಮ ಸಿಬ್ಬಂಧಿಗಳಾದ ಚಾಸಾ.2 ರಿಂದ 5 ರವರನ್ನು ಕರೆದುಕೊಂಡು ಖಾಸಗಿ ಇನೋವಾ ವಾಹನದಲ್ಲಿ ಮಾಗಡಿ ರಸ್ತೆಯ ಕಡೆಗೆ ಹೋಗಿರುತ್ತೇನೆ. ಮಾಗಡಿ ರಸ್ತೆಯ ಸಿಗೇಹಳ್ಳಿ ಗೇಟ್ ನಲ್ಲಿ ಇಬ್ಬರೂ ಆರೋಪಿತರು ಇನೋವಾ ವಾಹನದಲ್ಲಿ ಇರುವುದು ಪತ್ತೆ ಆಗಿರುತ್ತದೆ. ನಮ್ಮನ್ನು ಗಮನಿಸಿದ ಆರೋಪಿತರು ಇನೋವಾ ವಾಹನದಲ್ಲಿ ವೇಗವಾಗಿ ಮಾಚೋಹಳ್ಳಿ ಕಡೆಗೆ ಚಲಿಸಿಕೊಂಡು ಹೋಗಿರುತ್ತಾರೆ.

2. ನಾವು ಅವರನ್ನು ಹಿಂಬಾಲಿಸಿಕೊಂಡು ಹೋದಾಗ ಆರೋಪಿತರು ಕುಳಿತಿದ್ದ ಇನೋವಾ ವಾಹನ ಮಾಚೋಹಳ್ಳಿ ರಾಜ್ಯ ಅರಣ್ಯ ಪ್ರದೇಶದ ಒಳಗೆ ಪ್ರವೇಶಿಸುವುದು ಕಂಡು ಬಂದಿರುತ್ತದೆ. ನಾವು ಅರಣ್ಯ ಪ್ರದೇಶದ ಒಳಗೆ ಅರ್ಧ ಕಿ.ಮೀ ದೂರದ ವರೆಗೆ ಆರೋಪಿತರ ವಾಹನವನ್ನು ಹಿಂಬಾಲಿಸಿಕೊಂಡು ಹೋಗಿ ಆರೋಪಿತರ ವಾಹನಕ್ಕೆ 6.15 ರ ಸಮಯದಲ್ಲಿ ಅಡ್ಡಗಟ್ಟಿ ನಿಲ್ಲಿಸಿರುತ್ತೇವೆ. ಆರೋಪಿತರು ನಮ್ಮನ್ನು ಗಮನಿಸಿ ಅವರ ವಾಹನವನ್ನು ನಿಲ್ಲಿಸಿ ಓಡಲು ಪ್ರಯತ್ನಿಸಿದಾಗ ನಮ್ಮ ಠಾಣೆಯ ಸಿಬ್ಬಂಧಿಗಳು ಆರೋಪಿತರನ್ನು ಹಿಡಿಯಲು ಪ್ರಯತ್ನಿಸಿರುತ್ತಾರೆ. ಆ ಸಮಯದಲ್ಲಿ 2 ನೇ ಆರೋಪಿ ತನ್ನ ಬಳಿ ಇದ್ದ ಡ್ರ್ಯಾಗರ್ ನಿಂದ ಚಾಸಾ.2 ರವರ ಬಲ ಕುತ್ತಿಗೆಗೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ಚಾಸಾ.2 ರವರು ತಪ್ಪಿಸಿಕೊಂಡಾಗ ಸದರಿ ಏಟು ಚಾಸಾ.2 ರವರ ಎಡ ತೊಡೆಗೆ ಬಿದ್ದಿರುತ್ತದೆ. ನಂತರ ಚಾಸಾ.3 ರವರು 1 ನೇ ಆರೋಪಿಯನ್ನು ಹಿಡಿಯಲು ಹೋದಾಗ ಆತ ತನ್ನ ಬಳಿ ಇದ್ದ ಲಾಂಗ್ ನಿಂದ

ಚಾಸಾ.3 ರವರ ಎಡ ಕುತ್ತಿಗೆಗೆ ಬೀಸಿದಾಗ ಅವರು ತಪ್ಪಿಸಿಕೊಂಡಿದ್ದು ಸದರಿ ಏಟು ಚಾಸ.3 ರವರ ಎಡ ತೋಳಿಗೆ ಬಿದ್ದಿರುತ್ತದೆ. ಹಲ್ಲೆಯಲ್ಲಿ ಚಾಸಾ.2 ಮತ್ತು 3 ರವರಿಗೆ ರಕ್ತಗಾಯ ಆಗಿರುತ್ತದೆ.

3. ನಾನು ಆ ಸಮಯದಲ್ಲಿ ಇಬ್ಬರೂ ಆರೋಪಿತರು ಶರಣಾಗುವಂತೆ ಹೇಳಿ ಗಾಳಿಯಲ್ಲಿ ಗುಂಡು ಹಾರಿಸಿರುತ್ತೇನೆ. ಆದರೂ ಸಹ ಇಬ್ಬರೂ ಆರೋಪಿತರು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಮ್ಮ ಮೇಲೆ ದಾಳಿ ಮಾಡಲು ಪ್ರಯತ್ನಿಸಿದಾಗ ನಾನು ಹಾಗೂ ಚಾಸಾ.4 ರವರು ಆರೋಪಿತರ ಮೇಲೆ ತಲಾ ಒಂದೊಂದು ಸುತ್ತು ಗುಂಡು ಹಾರಿಸಿರುತ್ತೇವೆ. ಈ ರೀತಿ ಗುಂಡು ಹಾರಿಸಿದಾಗ 2 ನೇ ಆರೋಪಿಯ ಬಲ ಮಂಡಿಗೆ ಗುಂಡು ಏಟು ತಗಲಿ ರಕ್ತಗಾಯ ಆಗಿ ಆತನ ಕುಸಿದು ಬಿದ್ದಿರುತ್ತಾರೆ. 1 ನೇ ಆರೋಪಿಯ ಬಲಗಾಲಿನ ಹಿಮ್ಮಡಿಗೆ ಗುಂಡು ಏಟು ತಗುಲಿ ಆತನು ಕೆಳಗೆ ಕುಸಿದು ಬಿದ್ದಿರುತ್ತಾನೆ. ಕೂಡಲೇ 108 ಗೆ ಕರೆ ಮಾಡಿ ಇಬ್ಬರೂ ಆರೋಪಿತರನ್ನು, ಚಾಸಾ.2 ಮತ್ತು 3 ರವರನ್ನು ಆಸ್ಪತ್ರೆಗೆ ದಾಖಲಿಸಲು ಪ್ರಯತ್ನಿಸಿದಾಗ 108 ವಾಹನ ಬರಲು ತಡವಾದ ಕಾರಣ 4 ಜನರನ್ನು ನಮ್ಮ ಖಾಸಗಿ ವಾಹನದಲ್ಲಿ ಮಾಗಡಿ ರಸ್ತೆಯಲ್ಲಿ ಇರುವ ಅನುಪಮಾ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿರುತ್ತೇನೆ.

4. ನಂತರ ನಾನು ಠಾಣೆಗೆ ನಿಸ್ ತಂತು ಮೂಲಕ ಮಾಹಿತಿ ತಿಳಿಸಿ ಘಟನಾ ಸ್ಥಳ ರಕ್ಷಣೆ ಮಾಡುವಂತೆ ತಿಳಿಸಿದಾಗ ನಮ್ಮ ಠಾಣಾ ಸಿಬ್ಬಂಧಿ ಚಾಸಾ.8 ಇಮ್ರಾನ್ ಖಾನ್

ಇವರು ಸ್ಥಳಕ್ಕೆ ಬಂದು ಕೃತ್ಯ ಸ್ಥಳವನ್ನು ರಕ್ಷಣೆ ಮಾಡಿರುತ್ತಾರೆ. ನಂತರ ನಾನು ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಚಾಸಾ.17 ರವರಿಗೆ ಬೆರಳಚ್ಚು ಮಾಡಿದ ದೂರನ್ನು ರಾತ್ರಿ 8.00 ಗಂಟೆಗೆ ನೀಡಿರುತ್ತೇನೆ. ಸಾಕ್ಷಿದಾರರು ತಾನು ನೀಡಿದ ದೂರು, ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರು ಹಾಗೂ ಸಾಕ್ಷಿದಾರರ ಸಹಿಯನ್ನು ನಿ.ಪಿ.1, ನಿ.ಪಿ.1(ಎ) ಎಂದು ಗುರುತಿಸಲಾಯಿತು. ಚಾಸಾ.17 ರವರು ಪ್ರ.ವ.ವ ನೊಂದಾಯಿಸಿ ನನಗೆ ಒಂದು ಕಾಪಿಯನ್ನು ನೀಡಿರುತ್ತಾರೆ.

5. ಮಾರನೇ ದಿನ ಮಾನ್ಯ ಎಸ್‌ಪಿ ಇವರ ಆದೇಶದ ಮೇರೆಗೆ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.19 ರವರು ಪಡೆದು ನಮ್ಮ ಠಾಣೆಗೆ ಬಂದು ಘಟನಾ ಸ್ಥಳವನ್ನು ತೋರಿಸಲು ಕೋರಿರುತ್ತಾರೆ. ಅದೇ ದಿನ ಮಧ್ಯಾಹ್ನ 1.00 ರಿಂದ 2.30 ರ ಸಮಯದಲ್ಲಿ ಪಂಚ ಸಾಕ್ಷಿದಾರರಾದ ಚಾಸಾ.6 ಮತ್ತು 7 ರವರ ಸಮಕ್ಷಮ ಚಾಸಾ.19 ರವರಿಗೆ ನಾನು ಕೃತ್ಯ ಸ್ಥಳವನ್ನು ತೋರಿಸಿದ್ದು ಸದರಿ ಸ್ಥಳದಲ್ಲಿ ಚಾಸಾ.19 ರವರು ಮಹಜರ್ ಕ್ರಮ ಜರುಗಿಸಿರುತ್ತಾರೆ. ಆ ಸಮಯದಲ್ಲಿ ಸ್ಥಳಕ್ಕೆ ನನ್ನ ಜೊತೆ ಚಾಸಾ.4 ರವರು ಹಾಗೂ ಎಫ್ ಎಸ್ ಎಲ್ ತಜ್ಞರು ಹಾಜರಿದ್ದರು. ಸ್ಥಳದಲ್ಲಿ ಆರೋಪಿತರು ಕೃತ್ಯಕ್ಕೆ ಬಳಸಿದ ಒಂದು ಇನೊವಾ ಕಾರ್, ಪೊಲೀಸ್ ಅಧಿಕಾರಿಗಳ ಮೇಲೆ ಕೊಲೆ ಮಾಡಲು ಉಪಯೋಗಿಸಿದ ಒಂದು ಡ್ರ್ಯಾಗರ್ ಹಾಗೂ ಲಾಂಗ್ ಇತ್ತು. ಅದೇ ರೀತಿ ಸ್ಥಳದಲ್ಲಿ ಉಪಯೋಗಿಸಿದ ಮೂರು ಖಾಲಿ ಗುಂಡುಗಳು ಇತ್ತು.

ತನಿಖಾಧಿಕಾರಿಗಳು ಕೃತ್ಯ ಸ್ಥಳದಲ್ಲಿ ಇನೋವಾ ಕಾರ್, ಲಾಂಗ್, ಡ್ರ್ಯಾಗರ್, ಮೂರು ಖಾಲಿ ಗುಂಡುಗಳನ್ನು ಜಪ್ತಿಪಡಿಸಿರುತ್ತಾರೆ. ಚಾಸಾ.19 ರವರು ಆರೋಪಿತರ ಮೇಲೆ ಗುಂಡು ಹಾರಿಸಲು ಉಪಯೋಗಿಸಿ ಪಿಸ್ತೂಲ್ ಬಗ್ಗೆ ವಿಚಾರಿಸಿದಾಗ ನನ್ನ ಬಳಿ ಇದ್ದ ಗ್ಲ್ಯಾಕ್ ಕಂಪನಿಯ ಪಿಸ್ತೂಲ್ ಮಾಡಲ್ ನಂಬರ್ AACR095 ಪಿಸ್ತೂಲ್ ಹಾಜರುಪಡಿಸಿದ್ದು ಅದನ್ನು ಅಮಾನತ್ತುಪಡಿಸಿರುತ್ತಾರೆ. ಅದೇ ರೀತಿ ಚಾಸಾ.4 ರವರು ತಾನು ಉಪಯೋಗಿಸಿದ 2001 ನೇ ಮಾಡಲ್ 9MM ಪಿಸ್ತೂಲ್, ಪಿಸ್ತೂಲ್ ಚೇಂಬರ್ ನಲ್ಲಿ ಇದ್ದ ಒಂದು ಜೀವಂತ ಗುಂಡು ಹಾಗೂ ಮ್ಯಾಗಜೀನ್ ಅಲ್ಲಿ ಇದ್ದ ಎರಡು ಜೀವಂತ ಗುಂಡುಗಳನ್ನು, ಒಟ್ಟು 3 ಜೀವಂತ ಗುಂಡುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಚಾಸಾ.19 ರವರು ಜಪ್ತಿಪಡಿಸಿರುತ್ತಾರೆ. ಸದರಿ ವಸ್ತುಗಳಿಗೆ ಆರ್ಟಿಕಲ್ 1 ರಿಂದ 9 ಎಂದು ಗುರುತು ಮಾಡಿ ತನಿಖಾಧಿಕಾರಿಗಳು ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

6. ಸ್ಥಳದಲ್ಲಿ ಈ ಎಲ್ಲಾ ಪ್ರಕ್ರಿಯೆಗಳನ್ನು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿ ಛಾಯಾಚಿತ್ರಗಳನ್ನು ಚಾಸಾ.19 ರವರು ತೆಗೆದಿರುತ್ತಾರೆ. ಸ್ಥಳದಲ್ಲಿ ಸಿಕ್ಕ ಎಲ್ಲಾ ವಸ್ತುಗಳನ್ನು ಎಫ್ ಎಸ್ ಎಲ್ ತಜ್ಞರ ಸಹಾಯದಿಂದ ಮಹಜರ್ ಮೂಲಕ ಅಮಾನತ್ತುಪಡಿಸಿದ್ದು ಮಹಜರ್ ಗೆ ನಾನು, ಇಬ್ಬರೂ ಪಂಚರು ಸಹಿ ಮಾಡಿದ್ದು ಸಾಕ್ಷಿದಾರರು ಸದರಿ ಮಹಜರ್ ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2, ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ

ಅಮಾನತ್ತುಪಡಿಸಿದ ಎಲ್ಲಾ ವಸ್ತುಗಳ ಮೇಲೆ ಚಾಸಾ.19 ರವರು ಚೀಟಿ ಅಂಟಿಸಿ ಚಾಸಾ.19 ಹಾಗೂ ಪಂಚರು ಅವುಗಳ ಮೇಲೆ ಸಹಿ ಮಾಡಿರುತ್ತಾರೆ. ನಿ.ಪಿ.2 ರ ಮೂಲಕ ಅಮಾನತ್ತುಪಡಿಸಿದ ಎಲ್ಲಾ ವಸ್ತುಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ.

7. ಸಾಕ್ಷಿದಾರರು ಸ್ಥಳದಲ್ಲಿ ತೆಗೆದ ಒಟ್ಟು 16 ಫೋಟೋಗಳನ್ನು ನೋಡಿ ಗುತಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.3 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಆರೋಪಿತರು ಬಳಸಿದ ಇನೋವಾ ಕಾರ್ ಇರುವ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.3(ಎ) ಎಂದು ಗುರುತಿಸಲಾಯಿತು. ಮಾನ್ಯ ಪಿಪಿ ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಎಲ್ಲಾ ಸೀಲ್ಡ್ ಕವರ್ ಗಳನ್ನು ತೆರೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು. ಸಾಕ್ಷಿದಾರರು 3 ಖಾಲಿ ಗುಂಡುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿದಾರರು ರಕ್ತದ ಕಲೆ ಇರುವ ಒಂದು ಕಬ್ಬಿಣದ ಲಾಂಗ್, ರಕ್ತದ ಕಲೆ ಇರುವ ಒಂದು ಡ್ರ್ಯಾಗರ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿದಾರರು ತಾನು ಆರೋಪಿತರ ಮೇಲೆ ಗುಂಡು ಹಾರಿಸಲು ಉಪಯೋಗಿಸಿ ಗ್ಲಾಕ್ ಕಂಪನಿಯ ಪಿಸ್ತೂಲ್ ಹಾಗೂ ಚಾಸಾ.4 ರವರು ಉಪಯೋಗಿಸಿದ 9MM ಪಿಸ್ತೂಲ್ ಇವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.6 ಮತ್ತು 7 ಎಂದು ಗುರುತಿಸಲಾಯಿತು.

8. ಸಾಕ್ಷಿದಾರರು 3 ಜೀವಂತ ಗುಂಡುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.8 ಎಂದು ಗುರುತಿಸಲಾಯಿತು. ಸಾಕ್ಷಿದಾರರು ದೃಶ್ಯಾವಳಿ ಮೂಲಕ ನ್ಯಾಯಾಲಯದ ಮುಂದೆ ಹಾಜರುಪಡಿಸಿದ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನಂತರ ಎಫ್.ಎಸ್.ಎಲ್ ವರದಿಯನ್ನು ನಾನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

9. ಆರೋಪಿ ಪರ ವಕೀಲರನ್ನು ಕೂಗಿಸಿದ್ದು ಗೈರು ಹಾಜರಿರುತ್ತಾರೆ. ಪುನಃ ಪ್ರಕರಣವನ್ನು ಮಧ್ಯಾಹ್ನ 1.20 ಕ್ಕೆ ಕೂಗಿಸಿದ್ದು ಆರೋಪಿ ಪರ ವಕೀಲರು ಗೈರು ಹಾಜರಿದ್ದು ಯಾರು ಪ್ರತಿನಿಧಿಸದೇ ಇರುವ ಕಾರಣ ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ ಇಲ್ಲ.</u>**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.